# ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು

# ಶಿಕ್ಷಕ–ರಕ್ಷಕ ಸಂಘ

## ಶಿಕ್ಷಕ–ರಕ್ಷಕ ಸಂಘ 2022–23

### ಸಂಘದ ಕಾರ್ಯಕಾರಿ ಸಮಿತಿ

ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು

ಶಿಕ್ಷಕ–ರಕ್ಷಕ ಸಂಘ 2022–23

2022–23ನೇ ಸಾಲಿನ ಶಿಕ್ಷಕ-ರಕ್ಷಕ ಸಂಘದ ಕಾರ್ಯಕಾರಿ ಸಮಿತಿಯ ವಿವರ ಈ ಕೆಳಗಿನಂತಿದೆ.

**ಶಿಕ್ಷಕರ ವತಿಯಿಂದ:**

| | | |
|---|---|---|
| ಅಧ್ಯಕ್ಷರು | : | ಡಾ. ಅನಸೂಯ ರೈ (ಪ್ರಾಂಶುಪಾಲರು) |
| ಉಪಾಧ್ಯಕ್ಷರು | : | 1. ಡಾ. ಉಷಾ ಕೆ. ಎಂ.<br>2. ಡಾ. ಲತಾ ಎ. ಪಂಡಿತ್ |
| ಕಾರ್ಯದರ್ಶಿ | : | ಶ್ರೀಮತಿ ಅರುಣಾ ಕುಮಾರಿ |
| ಕೋಶಾಧಿಕಾರಿ | : | ಡಾ. ಇಂದಿರಾ ಜೆ. |
| ಪದನಿಮಿತ್ತ ಸದಸ್ಯರು | : | 1. ಡಾ. ಹರೀಶ್ ಎ.<br>2. ಡಾ. ಕುಮಾರ ಸುಬ್ರಹ್ಮಣ್ಯ ಭಟ್<br>3. ಡಾ. ಸಿದ್ಧರಾಜು ಎಂ.ಎನ್. |
| ಸಾಮಾನ್ಯ ಸದಸ್ಯರು | : | 1. ಡಾ. ಜಯರಾಜ್ ಎನ್.<br>2. ಡಾ. ಸುಧಾ ಎನ್. ವೈದ್ಯ<br>3. ಡಾ. ಭಾರತಿ ಪಿಲಾರ್ |

**ರಕ್ಷಕರ ವತಿಯಿಂದ**

| | | |
|---|---|---|
| ಕಾರ್ಯಾಧ್ಯಕ್ಷರು | : | 1. ಶ್ರೀಮತಿ ಮೈತ್ರೇಯಿ ಡಿ. |
| ಉಪಾಧ್ಯಕ್ಷರು | : | 1. ಶ್ರೀಮತಿ ಉಷಾ ಎಸ್, ಉಳ್ಳಾಲ್<br>2. ಶ್ರೀ ಸುರೇಶ್ ಆಚಾರ್ಯ<br>3. ಶ್ರೀಮತಿ ಜ್ಯೋತಿ ಕೃಷ್ಣಾನಂದ ಮಹಾಲೆ |
| ಸಹ ಕಾರ್ಯದರ್ಶಿ | : | 1. ಶ್ರೀಮತಿ ರೇಣುಕಾ ಬಿ. |
| ಸಾಮಾನ್ಯ ಸದಸ್ಯರು | : | 1. ಶ್ರೀ ಸದಾಶಿವ ಎಸ್. ಕೆ.<br>2. ಶ್ರೀ ರಾಘವೇಂದ್ರ ರಾವ್<br>3. ಶ್ರೀ ಅಶೋಕ್ ಕುಮಾರ್<br>3 ಶ್ರೀಮತಿ ಲೋಕೇಶ್ವರಿ<br>4 ಶ್ರೀ ಎಸ್. ಎನ್. ಗಂಗಾಧರ್<br>5. ಶ್ರೀ ಮಹಮದ್ |

Aruna Kumari
ಕಾರ್ಯದರ್ಶಿ

Anasuya 23.01.23
ಪ್ರಾಂಶುಪಾಲರು
ಪ್ರಾಂಶುಪಾಲರು
ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು




MANGALORE UNIVERSITY
UNIVERSITY COLLEGE MANGALORE
PARENT-TEACHER ASSOCIATION


UNIVERSITY COLLEGE MANGALORE
PARENT-TEACHER ASSOCIATION

# ವಾರ್ಷಿಕ ಮಹಾಸಭೆಯ ನಡಾವಳಿಗಳು

**ದಿನಾಂಕ: 21.01.2023ರಂದು ನಡೆದ ಶಿಕ್ಷಕ–ರಕ್ಷಕ ಸಂಘದ ಸರ್ವ ಸದಸ್ಯರ ಸಭೆಯ ನಡಾವಳಿಗಳು.**

1. ಅಪರಾಹ್ನ 2.00 ಘಂಟೆಗೆ ಸಭೆಯು ಶ್ರೀಮತಿ ರೇಖಾ ಶೆಟ್ಟಿಯವರ ಪ್ರಾರ್ಥನೆಯೊಂದಿಗೆ ಆರಂಭಗೊಂಡಿತು. ಕಾರ್ಯಕ್ರಮಕ್ಕೆ ಆಗಮಿಸಿದ ಸರ್ವರನ್ನೂ ವಿದ್ಯಾರ್ಥಿ ಸಂಘದ ಸಹ ನಿರ್ದೇಶಕರು ಹಾಗೂ ಸಂಘದ ಪದನಿಮಿತ್ತ ಸದಸ್ಯರಾದ ಡಾ. ಹರೀಶ್ ಎ. ಅವರು ಸ್ವಾಗತಿಸಿದರು.
2. ಸಂಘದ ಕಾರ್ಯದರ್ಶಿ ಶ್ರೀಮತಿ ಅರುಣಾ ಕುಮಾರಿ ಅವರು 2021–22ನೇ ಸಾಲಿನ ಶಿಕ್ಷಕ–ರಕ್ಷಕ ಸಂಘದ ವಾರ್ಷಿಕ ವರದಿಯನ್ನು ವಾಚಿಸಿದರು.
3. ಸಂಘದ ಕೋಶಾಧಿಕಾರಿ ಡಾ. ಇಂದಿರಾ ಜೆ. ಅವರು 2021–22ನೇ ಸಾಲಿನ ಲೆಕ್ಕಪತ್ರ ಮಂಡಿಸಿದರು. ಲೆಕ್ಕಪತ್ರವು ಸರ್ವಾನುಮತದಿಂದ ಅಂಗೀಕಾರಗೊಂಡಿತು.
4. ಸಂಘದ ಕಾರ್ಯಾಧ್ಯಕ್ಷರಾದ ಶ್ರೀ ಪುರುಷೋತ್ತಮ ಭಟ್‌ರವರು ತಾವು ಸಂಘದ ಸದಸ್ಯರಾಗಿ, ಕಾರ್ಯಾಧ್ಯಕ್ಷರಾಗಿ ಕಳೆದ ಮೂರು ವರ್ಷಗಳ ಅವಧಿಯ ಅನುಭವಗಳನ್ನು ಹಂಚಿಕೊಳ್ಳುತ್ತಾ ಶಿಕ್ಷಣ ಸಂಸ್ಥೆಯಲ್ಲಿ ದುಡಿಯುತ್ತಿರುವ ಎಲ್ಲರಿಗೂ ತಮ್ಮ ಧನ್ಯವಾದಗಳನ್ನು ಸಮರ್ಪಿಸುತ್ತಾ ಶುಭ ಕೋರಿದರು.
5. ರಕ್ಷಕರೊಂದಿಗೆ ನಡೆದ ಸಂವಾದ ಕಾರ್ಯಕ್ರಮದಲ್ಲಿ ಸದಸ್ಯರಾದ ಶ್ರೀ ಅಶೋಕ್ ಕುಮಾರ್, ಶ್ರೀ ಸದಾಶಿವ, ಶ್ರೀಮತಿ ಮೈತ್ರೇಯಿ, ಶ್ರೀಮತಿ ಲೋಕೇಶ್ವರಿ, ಶ್ರೀ ಮಹಮದ್ ಇವರು ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ದೊರಕುವ ಉತ್ತಮ ಶಿಕ್ಷಣದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಹಾಗೂ ವಿದ್ಯಾರ್ಥಿಗಳ ಮೊಬೈಲ್ ಬಳಕೆ ಬಗ್ಗೆ, ಗ್ರಂಥಾಲಯವನ್ನು ಸದುಪಯೋಗಪಡಿಸುವ ಬಗ್ಗೆ, ವಿದ್ಯಾರ್ಥಿಗಳ ತರಗತಿ ಹಾಜರಾತಿ ಮತ್ತು ಅವರಿಗೆ ದೊರಕುವ ವಿದ್ಯಾರ್ಥಿವೇತನಗಳ ಬಗ್ಗೆ ತಮ್ಮ ಸಲಹೆ ಅಭಿಪ್ರಾಯಗಳನ್ನು ಮಂಡಿಸಿದರು.
6. ಸಂಘದ ಅಧ್ಯಕ್ಷರಾದ ಪ್ರಾಂಶುಪಾಲರು ರಕ್ಷಕರೊಂದಿಗೆ ನಡೆದ ಸಂವಾದದಲ್ಲಿ ಅವರ ಸಲಹೆ ಹಾಗೂ ಅಭಿಪ್ರಾಯಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿದರು. ಈ ಸಭೆಯಲ್ಲಿ ರಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ಸಭೆಗೆ ಹಾಜರಾಗುವ ಅಗತ್ಯತೆಯನ್ನು ತಿಳಿ ಹೇಳಿದರು. ದಿನಾಂಕ: 01.02.2023ರಂದು ಕಾಲೇಜಿಗೆ ಭೇಟಿ ನೀಡುವ ನ್ಯಾಕ್ ಪೀರ್ ಸಮಿತಿಯೊಂದಿಗೆ ರಕ್ಷಕರ ಸಭೆಯೂ ನಡೆಯುವುದರಿಂದ ಎಲ್ಲರೂ ಅಂದು ಹಾಜರಾಗಬೇಕೆಂದು ಮನವಿ ಮಾಡಿದರು.
7. ಆನಂತರ ಸಂಘದ 2022–23ರ ಸಾಲಿನ ಪದಾಧಿಕಾರಿಗಳ ಆಯ್ಕೆ ಕಾರ್ಯಕ್ರಮವನ್ನು ಡಾ. ಕುಮಾರ ಸುಬ್ರಹ್ಮಣ್ಯ ಭಟ್‌ರವರು ನೆರವೇರಿಸಿದರು. ನೂತನ ಕಾರ್ಯಕಾರಿ ಸಮಿತಿಯ ಎಲ್ಲಾ ಪದಾಧಿಕಾರಿಗಳು ಹಾಗೂ ಸದಸ್ಯರ ಹೆಸರುಗಳನ್ನು ಘೋಷಿಸಿ ಅವರಿಗೆ ಹೂ ನೀಡಿ ವೇದಿಕೆಗೆ ಸ್ವಾಗತಿಸಲಾಯಿತು.
8. ನೂತನ ಕಾರ್ಯಾಧ್ಯಕ್ಷರಾಗಿ ಆಯ್ಕೆಗೊಂಡ ಶ್ರೀಮತಿ ಮೈತ್ರೇಯಿ ಅವರು ತಮ್ಮನ್ನು ಆಯ್ಕೆ ಮಾಡಿದ್ದಕ್ಕಾಗಿ ಎಲ್ಲರಿಗೂ ಕೃತಜ್ಞತೆ ವ್ಯಕ್ತಪಡಿಸಿದರು ಹಾಗೂ ಸಂಘದ ಮುಂದಿನ ಕಾರ್ಯ ಯೋಜನೆಗಳಿಗೆ ಸಹಕಾರ, ಸಲಹೆ ನೀಡುವುದಾಗಿ ಎಲ್ಲಾ ಪದಾಧಿಕಾರಿಗಳ ಪರವಾಗಿ ಭರವಸೆ ನೀಡಿದರು.
9. ಪ್ರಾಂಶುಪಾಲರಾದ ಡಾ. ಅನಸೂಯ ರೈ ಅವರ ಅಧ್ಯಕ್ಷೀಯ ಭಾಷಣದ ನಂತರ ಸಂಘದ ಪದನಿಮಿತ್ತ ಸದಸ್ಯರು ಹಾಗೂ ಆಂತರಿಕ ಗುಣಮಟ್ಟ ಕೋಶದ ಸಂಯೋಜಕರಾದ ಡಾ. ಸುರೇಶ್‌ರವರ ವಂದನಾರ್ಪಣೆಯೊಂದಿಗೆ ಸಭಾ ಕಾರ್ಯಕ್ರಮ ಮುಕ್ತಾಯಗೊಂಡಿತು. ಆನಂತರ ರಕ್ಷಕರು ಲಘು ಉಪಾಹಾರ ಸೇವನೆಯೊಂದಿಗೆ ತಮ್ಮ ಮಕ್ಕಳ ಬಗ್ಗೆ ಶಿಕ್ಷಕರೊಂದಿಗೆ ಸಮಾಲೋಚನೆ ನಡೆಸಿದರು. ಸಭಾ ಕಾರ್ಯಕ್ರಮವನ್ನು ಶಿಕ್ಷಕ–ರಕ್ಷಕ ಸಂಘದ ಸದಸ್ಯರಾದ ಡಾ. ಭಾರತಿ ಪಿಲಾರ್‌ರವರು ನಿರೂಪಿಸಿದರು.

Aruna Kumari
ಕಾರ್ಯದರ್ಶಿ

ಪ್ರಾಂಶುಪಾಲರು

ಪ್ರಾಂಶುಪಾಲರು
ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು